(ಸಭೆಯು ಬೆಳಿಗ್ಗೆ 11 ಗಂಟೆ 15 ನಿಮಿಷಕ್ಕೆ ಗಂಟೆಗೆ ಪ್ರಾರಂಭಗೊಂಡಿತು ಸಭಾಧ್ಯಕ್ಷರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಅಧ್ಯಕ್ಷರು: ಒಂದು ಪ್ರಕಟಣೆ ಇದೆ.

ಪ್ರಕಟಣೆ

ದಿನಾಂಕ: 21.07.2014 ರಂದು ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸದನದ ಸದಸ್ಯರಾಗಿರುವ ಶ್ರೀ ಮನೋಹರ್ ಹೆಚ್. ತಹಸೀಲ್ದಾರ್ ಮತ್ತು ಶ್ರೀ ನಾರಾಯಣ ಗೌಡ ಇವರುಗಳಿಗೆ ಜನ್ಮ ದಿನದ ಶುಭಾಶಯಗಳು. ಈ ಸಂದರ್ಭದಲ್ಲಿ ಭಗವಂತನ್ನು ತಮಗೆ ಆಯುರಾರೋಗ್ಯವನ್ನು ಹಾಗೂ ಐಶ್ವರ್ಯಗಳನ್ನು ದಯಪಾಲಿಸಲೆಂದು ಹಾರೈಸುತ್ತೇನೆ.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ವಿಷಯ: ಕಾವೇರಿ ಅಚ್ಚುಕಟ್ಟಿನಲ್ಲಿ ಹೇಮಾವತಿ ಕೆ.ಆರ್.ಎಸ್. ಮತ್ತು ಹಾರಂಗಿ ಜಲಾಶಯಗಳಿಂದ ತಮಿಳುನಾಡಿಗೆ ನೀರು ಬಿಡುತ್ತಿರುವ ಬಗ್ಗೆ.

ಕೆ.ಆರ್.ಎಸ್ ಮತ್ತು ಹಾರಂಗಿ ಜಲಾಶಯಗಳಿಂದ ತಮಿಳುನಾಡಿಗೆ ನೀರನ್ನು ಬಿಡುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಇವತ್ತು ನಿಯಮ 69ರ ಅಡಿಯಲ್ಲಿ ಅತ್ಯಾಚಾರ ಮತ್ತು ಲೈಗಿಂಕ ದೌರ್ಜನ್ಯದ ಬಗ್ಗೆ ಅಜೆಂಡಾದಲ್ಲಿ ಚರ್ಚೆಗೆ ಇಟ್ಟಿದ್ದೀರಿ. ಈ ವಿಷಯ ಮೊಟ್ಟ ಮೊದಲನೆಯದಾಗಿ ಚರ್ಚೆಯಾಗಬೇಕೆಂದು ನಮ್ಮ request ಇದೆ.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಜಗದೀಶ್ ಶೆಟ್ಟರೆ, ಒಂದು ನಿಮಿಷ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಕಾವೇರಿ ವಿಚಾರವಾಗಿ ನಾವೂ ಸಹ ಮಾತನಾಡ ಬೇಕಾಗಿದೆ. ಕಾವೇರಿ ನದಿಯಿಂದ ನೀರು ಬಿಡುತ್ತಿದ್ದಾರೆ.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಒಂದೇ ಸೆಕೆಂಡ್‌ನಲ್ಲಿ ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು:– ಬೇಗ, ಸಮಯ ವ್ಯರ್ಥ ಮಾಡಬೇಡಿ.

ಶ್ರೀ ಎನ್. ಚಲುವರಾಯಸ್ವಾಮೀ:– ಮಾನ್ಯ ಅಧ್ಯಕ್ಷರೆ, ಸಮಯ ವ್ಯರ್ಥ ಮಾಡುವುದಿಲ್ಲ, ಒಂದೇ ಸೆಕೆಂಡ್‌ನಲ್ಲಿ ಹೇಳುತ್ತೇನೆ. ಕಳೆದ ಒಂದು ವಾರದಿಂದ ರೈತರಿಗೆ ಒಂದು ತಪ್ಪು ಭಾವನೆ ಹೋಗುವ ರೀತಿಯಲ್ಲಿ ಇವತ್ತು ಕೆ.ಆರ್.ಎಸ್., ಹಾರಂಗಿ ಮತ್ತು ಹೇಮಾವತಿ ಜಲಾಶಯಗಳಿಂದ ನೀರನ್ನು ತಮಿಳುನಾಡಿಗೆ ಬಿಡುತ್ತಿದ್ದಾರೆ. ರೈತರು ಕಬ್ಬು ಬೆಳೆದು, ಭತ್ತದ ಪೈರು ನಾಟಿ ಮಾಡುವಂಥ ಸಂದರ್ಭದಲ್ಲಿ ಇಡೀ ರೈತರು ಇವತ್ತು ಆತಂಕಕ್ಕೆ ಒಳಗಾಗಿದ್ದಾರೆ. ಸರ್ಕಾರ ಯಾವುದೇ ಮಾಹಿತಿ ಇಲ್ಲದೇ, ನೀರು ಹೋಗುತ್ತಿರುವಂಥದ್ದರ ಬಗ್ಗೆ ದಯಮಾಡಿ ಸರ್ಕಾರ ತಕ್ಷಣ ಈ ಸದನದಲ್ಲಿ ಉತ್ತರ ಕೊಡಬೇಕು. ಕೆ.ಆರ್.ಎಸ್. ನಿಂದ ಎಷ್ಟು ನೀರು ಬಿಡುತ್ತಿದ್ದಾರೆಂದು ತಿಳಿಸಬೇಕು.

ಅಧ್ಯಕ್ಷರು:– OK.

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಬೆಳೆಗಳೆಲ್ಲಾ ಒಣಗುತ್ತಿದೆ, ಬೆಳೆಗಳಿಗೆ ನೀರು ಕೊಡುತ್ತಿಲ್ಲ, ತಮಿಳುನಾಡಿಗೆ ನೀರು ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಈ ವಿಷಯವನ್ನು ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಎಂ.ಟಿ. ಕೃಷ್ಣಪ್ಪ:– ಮಾನ್ಯ ಅಧ್ಯಕ್ಷರೆ, ಹೇಮಾವತಿ ಜಲಾಶಯದಿಂದ ನೀರು ಬಿಟ್ಟಿದ್ದಾರೆ. ಈ ಬಗ್ಗೆ ಜಿಲ್ಲಾ ಸಚಿವರಾದ Law Minister ರವರು ಹೇಳಬೇಕು.

ಅಧ್ಯಕ್ಷರು:– ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಆಮೇಲೆ ತೆಗೆದುಕೊಳ್ಳಿ, ಇದರ ಬಗ್ಗೆ ನಾವು ಸಹ ಮಾತನಾಡುತ್ತೇವೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಇದು important ಅರ್ಧ ಗಂಟೆ ತೆಗೆದುಕೊಳ್ಳಿ.

ಅಧ್ಯಕ್ಷರು:– ಈ ವಿಷಯ ಆಮೇಲೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಎನ್. ಚಲುವರಾಯ ಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಮಗೆ ಉತ್ತರ ಕೊಟ್ಟು ಬಿಡಲಿ.

(ಗೊಂದಲ)

ಅಧ್ಯಕ್ಷರು: ಸಮಯ ವ್ಯರ್ಥ ಮಾಡಬೇಡಿ, ಅವಕಾಶ ಕೊಡುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ನಮಗೆ ಕುಡಿಯುವುದಕ್ಕೆ ನೀರು ಬಿಡುತ್ತಿಲ್ಲ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮೊದಲು ಕಾಲುವೆಗಳಿಗೆ ನೀರು ಕೊಡದೇ ನದಿಗೆ ಹರಿಸುತ್ತಿದ್ದಾರೆ, ದಯಮಾಡಿ ಅದನ್ನು ನಿಲ್ಲಿಸಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಕಾವೇರಿ ವಿಷಯ ಎಷ್ಟು ಪ್ರಾಮುಖ್ಯವಾದುದೆಂದು ಗೊತ್ತಿದೆ. ಮಾನ್ಯ ಚೆಲುವರಾಯಸ್ವಾಮಿಯವರು

ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ತಾವು ಆ ವಿಷಯವಾಗಿ ಪ್ರತ್ಯೇಕವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ಚರ್ಚೆಗೆ ಅವಕಾಶ ಕೊಡುತ್ತೀರಾ?

ಅಧ್ಯಕ್ಷರು:– ಕೊಡುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ:– ಯಾವಾಗ?

ಅಧ್ಯಕ್ಷರು:– ಸ್ವಲ್ಪ Business ಆಗಲಿ, ಆಮೇಲೆ ಅವಕಾಶ ಕೊಡುತ್ತೇನೆ. ಮಾನ್ಯ ದತ್ತಾರವರೆ ನಿಯಮ–69ಅನ್ನು ಈಗಲೇ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ನಾನು ಈಗಲೇ ಅವಕಾಶ ಕೊಡುತ್ತೇನೆ, ಅದರಲ್ಲಿ ನಿಮ್ಮ ಪಕ್ಷದ್ದು ಇದೆ.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ಆಯಿತು, ಅದಕ್ಕೂ ಮುಂಚೆ ಸರ್ಕಾರ ಆ ಬಗ್ಗೆ ಒಂದು statement ಮಾಡಲಿ. ಅವರು ನೀರನ್ನು ನಿಲ್ಲಿಸಿದ್ದೇವೆ ಅಥವಾ ನೀರನ್ನು ಬಿಡುತ್ತಿದ್ದೇವೆ ಎಂದು ಏನಾದರೂ ಒಂದು statement ಮಾಡಲಿ.

(ಗೊಂದಲ)

ಶ್ರೀ ಆರ್.ಅಶೋಕ್:– ಮಾನ್ಯ ಅಧ್ಯಕ್ಷರೆ, Law Minister ಆಗಿರುವ ಮಾನ್ಯ ಜಯಚಂದ್ರರವರು ಇಲ್ಲಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರೆ, ನೀರಿನ ಮಟ್ಟ ಎಷ್ಟಿದೆ, ಅದರಲ್ಲಿ ಎಷ್ಟು ನೀರನ್ನು ಬಿಟ್ಟಿದ್ದಾರೆಂಬ ಬಗ್ಗೆ ಒಂದು ಹೇಳಿಕೆ ಮಾಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ನೀರಾವರಿ ಸಚಿವರು ಒಂದು statement ಕೊಡಲಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಮಾನ್ಯ ನೀರಾವರಿ ಸಚಿವರಿಂದ ಪ್ರತ್ಯೇಕವಾಗಿ ಹೇಳಿಕೆಯನ್ನು ಕೊಡಿಸುತ್ತೇನೆ.

ಶ್ರೀ ಆರ್.ಅಶೋಕ:– ಮಾನ್ಯ ಅಧ್ಯಕ್ಷರೆ, ಅಲ್ಲಿ ಏನು ಸನ್ನಿವೇಶವಿದೆ, ಅಲ್ಲಿ ರೈತರೆಲ್ಲಾ ಹೋರಾಟ ಮಾಡುತ್ತಿದ್ದಾರೆ. ಅಲ್ಲಿ ನೀರು ಬಿಟ್ಟಿದ್ದೀರಿ, ಅಲ್ಲಿ ಕದ್ದುಮುಚ್ಚಿ ಬಿಡುವ ಪ್ರಶ್ನೆ?

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ದಯವಿಟ್ಟು statement ಮಾಡಿಸಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ನೀರಾವರಿ ಸಚಿವರಿಂದ statement ಮಾಡಿಸುತ್ತೇನೆ.

ಶ್ರೀ ಆರ್. ಅಶೋಕ:– ಈಗ ಕದ್ದುಮುಚ್ಚಿ ನೀರು ಬಿಡುತ್ತಿದ್ದಾರೆ? ಇಲ್ಲ, ಎಂದು ಅವರ ಪ್ರಶ್ನೆ. ಅಲ್ಲಿ ರೈತರು ಗಲಾಟೆ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಸಚಿವರು ಹೇಳುತ್ತಾರೆ, ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:– ಆಮೇಲೆ ಹೇಳಿಕೆ ಕೊಡುತ್ತಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಸದನ ಪ್ರಾರಂಭವಾಗುವುದಕ್ಕೆ ಮುಂಚೆ ಇದನ್ನು ಕೊಟ್ಟಿದ್ದಾರೆ. ನೀರಾವರಿ ಸಚಿವರಿಂದ ಸಮಗ್ರವಾದಂಥ ಒಂದು ಹೇಳಿಕೆ ಕೊಡಿಸುತ್ತೇವೆ. ಹೇಮಾವತಿ, ಕಾವೇರಿ, ಕಬಿನಿಯಿಂದ ಎಷ್ಟು ನೀರು ಬಿಟ್ಟಿದ್ದೇವೆ, inflow ಎಷ್ಟಿದೆ, ಎಲ್ಲವನ್ನೂ ಕೊಡಿಸುತ್ತೇವೆ.

ಶ್ರೀ ಎನ್. ಚಲುವರಾಯಸ್ವಾಮಿ:– ಹಾರಂಗಿಯಿಂದ, ಕಬಿನಿಯಿಂದ, ಕೆ.ಆರ್.ಎಸ್.ನಿಂದ, ಹೇಮಾವತಿಯಿಂದ ನೀರು ತಮಿಳುನಾಡಿಗೆ ಹರಿದು ಹೋಗುತ್ತಿದೆ. ಆದರೆ ಅವುಗಳ ಅಚ್ಚುಕಟ್ಟಿನಲ್ಲಿ ಅಂದರೆ ಹಾಸನ, ಮಂಡ್ಯ, ಮೈಸೂರಿನಲ್ಲಿ ರೈತರು ಕಬ್ಬು ಬೆಳೆದಿದ್ದು ಅಲ್ಲಿಗೆ ನೀರು ಬಿಡುತ್ತಿಲ್ಲ. ಕುಡಿಯುವ ನೀರಿಗಾಗಿ ಕೆರೆಕಟ್ಟೆಗಳನ್ನು ತುಂಬಿಸುವುದಕ್ಕೆ ನೀರು ಕೊಡುತ್ತಿಲ್ಲ. ಇದರ ಬಗ್ಗೆ ಸರ್ಕಾರ ದಯಮಾಡಿ ಉತ್ತರ ಕೊಡಬೇಕು.

ಶ್ರೀ ಟಿ.ಬಿ. ಜಯಚಂದ್ರ:– ಆತಂಕ ಪಡುವುದು ಬೇಡ, ಉತ್ತರ ಕೊಡಿಸುತ್ತೇವೆ.

ಶ್ರೀ ಜಗದೀಶ ಶೆಟ್ಟರ್:– ನೀರಾವರಿ ಸಚಿವರಿಂದ ಒಂದು ಹೇಳಿಕೆ ಕೊಡಿಸಿ.

ಅಧ್ಯಕ್ಷರು:– ಆಯಿತು, ಕೊಡುತ್ತಾರೆ. ಶೆಟ್ಟರ್‌ರವರೇ, ನೀವು ಪ್ರಾರಂಭಮಾಡಿ.

(ಗೊಂದಲ)

ಅಧ್ಯಕ್ಷರು:– ಆಮೇಲೆ ಅವರು ಹೇಳಿಕೆ ಕೊಡುತ್ತಾರೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ನಮ್ಮ ನಾಲೆಗಳಲ್ಲಿ ನೀರಿಲ್ಲ. ನೀರಿಲ್ಲದೇ ನಾಲೆಗಳು ಒಣಗುತ್ತಿವೆ. ನಮ್ಮ ನಾಲೆಗಳಿಗೆ ನೀರು ಕೊಟ್ಟಾದ ಮೇಲೆ ಬೇಕಾದರೆ ಅವರು ನೀರು ಬಿಡಲಿ.

ಅಧ್ಯಕ್ಷರು:– ಹೇಳಿಕೆ ಕೊಡುತ್ತಾರೆ, ಆಮೇಲೆ ನೀವು ಚರ್ಚೆ ಮಾಡಿ.

2. ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ: ರಾಜ್ಯದಲ್ಲಿ ಇತ್ತೀಚೆಗೆ ದಿನಗಳಲ್ಲಿ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿದ್ದು, ಅದನ್ನು ತಡೆಯುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿರುವ ಬಗ್ಗೆ.